INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,01-09
Peer Reviewed Journal, Referred Journal

# ಸ್ವಾಮಿ ದಯಾನಂದ ಸರಸ್ವತಿ ಅವರ ದೃಷ್ಟಿಯಲ್ಲಿ ಧರ್ಮ

ಡಾ. ಶಿವಶಂಕರ .ಎಸ್.[1]

ಸ್ವಾಮಿ ದಯಾನಂದ ಸರಸ್ವತಿ ಅವರು ನವಯುಗದ ನಿರ್ಮಾಪಕರು, ವಿಚಾರವಾದಿಗಳು, ಮಹಾನ್ ಚಿಂತಕರು, ಮಹರ್ಷಿಗಳು ಹಾಗೂ ಬಹುದೊಡ್ಡ ವಿದ್ವಾಂಸರಾಗಿದ್ದರು. 19ನೇ ಶತಮಾನದ ಧಾರ್ಮಿಕ ಮತ್ತು ಸಾಮಾಜಿಕ ಸಂಗ್ರಾಮದ ಪ್ರವರ್ತಕರು. ಸಮಾಜ ಸುಧಾರಕರು. ವೇದಗಳ ಹಿರಿಮೆಯನ್ನು ಇಡೀ ಜಗತ್ತಿಗೇ ಸಾರಿದವರು. ವೇದಗಳಿಗೆ ಹಿಂತಿರುಗಿ ಎಂಬ ಕರೆಯನ್ನು ಕೊಟ್ಟವರು. ಆರ್ಯ ಸಮಾಜದ ಸಂಸ್ಥಾಪಕರು. ಸ್ವಾಮಿ ದಯಾನಂದ ಸರಸ್ವತಿ ಅವರು ಗುಜರಾತಿನ ಟಂಕಾರ ಎಂಬ ನಗರದಲ್ಲಿ ಕರ್ಷನ್ ಜೀ ಲಾಲ್ ಜೀ ತಿವಾರಿ ಮತ್ತು ಅಮೃತ ಬಾಯಿ ಎಂಬ ಆದರ್ಶ ದಂಪತಿಗಳಿಗೆ ದಿನಾಂಕ "12-2-1825"[1] ರಂದು ಜನಿಸಿದವರು. ಇವರು ಆರ್ಯ ಸಮಾಜವನ್ನು ಭಾರತದಲ್ಲಿ ಸ್ಥಾಪಿಸುವ ಮೂಲಕ ಇಲ್ಲಿನ ಧರ್ಮಕ್ಕೆ ಪ್ರೋತ್ಸಾಹವನ್ನು ಕೊಟ್ಟವರು. ಈ ಹಿನ್ನೆಲೆ ಇವರು ಹೊಂದಿದ್ದಂತಹ ಧರ್ಮದ ಪರಿಕಲ್ಪನೆಯನ್ನು ಮುಂದಿನಂತೆ ಚರ್ಚಿಸಲಾಗಿದೆ.

"ಧರ್ಮ ಎಂಬ ಅರ್ಥವು ಸಂಸ್ಕೃತ ಪದದ "ಧೃ" ಎಂಬ ಧಾತುವಿನಿಂದ ಮೂಡಿ ಬಂದಿದೆ. "ಧೃ" ಎಂದರೆ ಎತ್ತಿ ಹಿಡಿ, ಸಂರಕ್ಷಿಸು, ಆಸರೆಯಾಗಿರುವುದು. ಮನಶುದ್ಧೀಕರಣ ಮತ್ತು ಎಲ್ಲವನ್ನು ನಿಯಂತ್ರಿಸುವ ಒಂದು ಅದ್ಭುತ ಶಕ್ತಿಯೇ ಧರ್ಮ"[2] ಎಂದು ಕರೆಯಲಾಗುವುದು. ಧರ್ಮ ಎಂಬ ಪದ ಬಹಳ ಪ್ರಾಚೀನವಾದುದು. ಅದು ಎಲ್ಲ ಭಾರತೀಯರ ನಾಲಗೆಯ ಮೇಲೂ ಇದೆ. ಅದು ಬಹಳ ಅರ್ಥಗರ್ಭಿತವಾದ ಪದ. ಅದನ್ನು ಕುರಿತು ವಿಫುಲವಾದ-ವಿವಾದಗಳು ನಡೆದಿವೆ. ಸಾಮಾನ್ಯವಾಗಿ ಧರ್ಮ ಎಂದರೆ ಒಂದು ಅತೀತ ತತ್ವದ ಸುತ್ತಲೂ ನಡೆದು ಬಂದ ನಂಬಿಕೆ, ನಡವಳಿಕೆ, ಅಭ್ಯಾಸ, ಪರಂಪರೆ, ಆಚಾರ ವಿಚಾರ, ಒಂದು ವಸ್ತುವಿನ ಸ್ವಭಾವ, ಪ್ರಕೃತಿಯ ನಿಯಮಗಳು ದಾನ-ಧರ್ಮ, ಕರ್ತವ್ಯ, ನ್ಯಾಯ-ನೀತಿ-ನಿಯಮ ಸಾಧಾರಣ ಧರ್ಮ, ವಿಶೇಷ ಧರ್ಮ, ಗುಣಧರ್ಮ, ಮತಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮ, "ಋಷಿ ವಾಕ್ಯ ಧರ್ಮ" ಮುಂತಾದವು. ಋಷಿವಾಕ್ಯಧರ್ಮ ವೆಂದರೆ ಋಷಿಮುನಿಗಳು ತಮ್ಮ ಧೀರ್ಘ ಕಾಲದ ತಪಸ್ಸಿನ ಫಲಗಳಿಂದ ಪಡೆದಂತಹ ಸತ್ಯ, ಜ್ಞಾನ, ಬೆಳಕನ್ನು

[1]. ಅಧ್ಯಾಪಕರು ,ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು

ಜಗತ್ತಿಗೆ ಉಪದೇಶಿಸಿರುವುದನ್ನು ಋಷಿವಾಕ್ಯ ಅಥವಾ 'ವೇದ' ವೆಂದು ಕರೆಯುವರು. ಉದಾಗೆ. ಬುದ್ಧ, ಮಹಾವೀರ, ಬಸವಣ್ಣ, ವಿವೇಕಾನಂದ ಅವರಂಥಹ ನುಡಿ ಮುತ್ತುಗಳು ಸ್ವಾಮಿ ದಯಾನಂದರ ಅವರ ದೃಷ್ಟಿಯಲ್ಲಿ ಋಷಿಪ್ರಣೀತಧರ್ಮ. ಅಂದರೆ ವೇದೋಕ್ತಧರ್ಮದ ಕಡೆಗೆ ಅವರು ಹೆಚ್ಚು ಒಲವು ತೋರಿಸುವುದನ್ನು ನಾವು ಕಾಣಬಹುದು. ಐಕ್ಯತೆ, ಭದ್ರತೆ, ಸಮರಸ ಹಾಗೂ ಜನರ ಪಾಲನೆ ಮಾಡಿದಾಗ ಜೀವನ ಉನ್ನತ ಸ್ಥಿತಿಗೇರುತ್ತದೆ. ಅವುಗಳನ್ನು ಅವುಗಳ ಪಾಲನೆಗಳನ್ನು ನಿರ್ಲಕ್ಷಿಸಿದರೆ ಸಮಾಜದಲ್ಲಿ ಅರಾಜಕತೆ ಉದ್ಭವಿಸುತ್ತಿದೆ. ವ್ಯಕ್ತಿಯು ನಾಶ ಹೊಂದುತ್ತಾನೆ. ನೈತಿಕತೆಗೆ ಮತ್ತೊಂದು ಹೆಸರೇ ಧರ್ಮ. ಸಾಮಾಜಿಕ ಮತ್ತು ರಾಜನಿಯಮಗಳು ಧರ್ಮವೆನಿಸುತ್ತವೆ. ಯಾವುದರಿಂದ ಈ ಜಗತ್ತಿನಲ್ಲಿ ಮಾನವ ಸಂಸ್ಕೃತಿ ಹೊರಹೊಮ್ಮಿ ಸಭ್ಯತೆ ಎದ್ದು ಕಾಣುತ್ತದೋ ಅದೇ ಧರ್ಮವಾಗಿದೆ. ಯಾವುದನ್ನಾದರೂ ಧರ್ಮ ಎಂದು ಹೇಳಬೇಕಾದರೆ ಅದಕ್ಕಿರುವ ಆಧಾರವೇ ವೇದಗಳು. ಅದನ್ನೇ ವೇದೋಕ್ತಧರ್ಮ ಎಂದು ಸ್ವಾಮೀ ದಯಾನಂದ ಅವರು ಕರೆಯುತ್ತಾರೆ.

ವೇದ ವಿರುದ್ಧವಾದ ಧರ್ಮವು ಧರ್ಮವೇ ಅಲ್ಲ. ವೇದ ವಿರುದ್ಧ ನೀತಿ ನಿಯಮಗಳು ಅಧರ್ಮ ಎನಿಸಿಕೊಳ್ಳುತ್ತವೆ. 'ಧರ್ಮೋ ರಕ್ಷತಿ ರಕ್ಷಿತಃ" ಎಂಬ ವಾಕ್ಯ ಜನಜನಿತವೇ ಆಗಿದೆ. ಅಂದರೆ ಧರ್ಮವನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುತ್ತದೆ. ಧರ್ಮವು ಸುರಕ್ಷಿತವಾಗಿದ್ದರೆ ಎಲ್ಲರೂ ಸುರಕ್ಷಿತರಾಗಿರುತ್ತಾರೆ. ಅಧರ್ಮವು ಅವನತಿ ಹೊಂದಿದಾಗಲೆ ಮಾನವರು ನೆಮ್ಮದಿಯಾಗಿರಲು ಸಾಧ್ಯ. ವೈಧಿಕ ಧರ್ಮದ ರಕ್ಷಣೆಯ ಜವಾಬ್ದಾರಿ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಇದೆಯೆಂದು ದಯಾನಂದ ಅವರು ಹೇಳುತ್ತಾರೆ. ಅಧರ್ಮದಿಂದ ಲೋಕದಲ್ಲಿ ದುಃಖ ಅಶಾಂತಿಯು ಉದ್ಭವಿಸುತ್ತದೆ. ಪಾಶವೀ ಶಕ್ತಿಗಳು ವಿಜೃಂಭಿಸುತ್ತವೆ. ಮಾನವ ಸಮಾಜವು ಪಶುಗಳ ಸಮಾಜದ ದುಃಸ್ಥಿತಿಗೆ ಹೋಗುತ್ತದೆ. ಇಹಪರ ಎರಡನ್ನೂ ಸಾಧಿಸುವುದಕ್ಕೆ ದಾರಿ ತೋರುವುದೇ ಧರ್ಮ. ಅದು ಸಾರ್ವತ್ರಿಕ ಹಾಗೂ ಸರ್ವಕಾಲಿಕವಾದ ತತ್ವ. ಅದನ್ನೇ ಮಾನವಧರ್ಮ ಎನ್ನುವರು. ಅದು ಇಡೀ ಮಾನವ ಜಾತಿಗೆ ಅನ್ವಯಿಸುವ ಪದವೇ ಆಗಿದೆ. ಪಾಲನೆ, ಪೋಷಣೆ ನೀಡುವ ಶಕ್ತಿಯೇ ಅದರ ಅಭಿವ್ಯಕ್ತಿಗೆ ಋಗ್ವೇದವು ಹೀಗೆ ಸಾರುತ್ತದೆ. ಅದೆನೆಂದರೆ; "ದಿವೋ ಧರ್ಮನ್ ಧರುಣೀ"[3.] ದೇಹದಾರಿಯಾದ ಜೀವಾತ್ಮನು ಪತನ ಹೊಂದಲು ಅವಕಾಶ ಕೊಡದೆ ಆಧ್ಯಾತ್ಮಿಕವಾಗಿ ಆತನನ್ನು ಎತ್ತಿಹಿಡಿದು ಇಹಪರಗಳೆರಡನ್ನು ಅಂದರೆ, ಸಾಂಸಾರಿಕ ಅಭ್ಯುದಯ ಮತ್ತು ಪಾರಮಾರ್ಥಿಕ ಆನಂದವನ್ನು ಸಾಧಿಸುವ ಸಾಮರ್ಥ್ಯವನ್ನು ದಯಾ ಧರ್ಮವೆನ್ನುತ್ತಾರೆ. ಅಥರ್ವಣವೇದವು ಇದನ್ನೇ ಹೇಳುತ್ತದೆ. 'ಧರ್ಮಣಾ ಮಿತಾವರುಣಾವಿಪಶ್ಚಿತಾ' ಧರ್ಮ ಎಂಬ ಪದವನ್ನು ವೇದಗಳು 'ಋತ' ಎಂದು ಕರೆಯುತ್ತವೆ. ಋತ ಎಂದರೆ ಆತ್ಮೋದ್ಧಾರಕವಾದ ಸದ್ಗುಣಗಳ ಮೊತ್ತ. ಸಮಸ್ತ ಸದ್ಗುಣಗಳ ರಾಶಿ. ಸರ್ವ ಸ್ವತಂತ್ರ ಪರಮಾತ್ಮನ ವಿಧಾನವೇ 'ಋತ' ಶಾಶ್ವತ ಪ್ರಮಾಣವೇ ವೇದದ ಆದರ ಆಶ್ರಯದಲ್ಲಿ ಎಲ್ಲಾ ಕಡೆಯಿಂದಲೂ ಜ್ಞಾನವನ್ನು ಪಡೆದುಕೊಳ್ಳುವುದು ಧರ್ಮವೆನಿಸುವುದು. 'ವೇದಗಳ ಮಾರ್ಗ ಧರ್ಮದ ಮಾರ್ಗ' ವೇದಗಳು ನೀಡುವುದು ನಿರ್ಮಲವಾದ

ಪರಿಶುದ್ಧವಾದ ಜ್ಞಾನವನ್ನು ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಜ್ಞಾನದಾಯಕ ಮಂತ್ರಗಳು ಅತ್ಯವಶ್ಯಕ. 'ವೇದಮಂತ್ರಗಳ ಜ್ಞಾನದ ಬೆಳಕನ್ನು ನೋಡಲಾರದ ಜ್ಞಾನದ ಉಪದೇಶವನ್ನು ಕೇಳಲಾರದ ಮೂಢ ಜನರು ಧರ್ಮಪಥವನ್ನು ಬಿಟ್ಟು ಬಿಡುತ್ತಾರೆಂದು ಋಗ್ವೇದವು ಸಾರುತ್ತದೆ'. ಈ ಎಲ್ಲಾ ಸದ್ಗುಣಗಳನ್ನು ಮೈಗೂಡಿಸಿಕೊಳ್ಳುವುದೇ ಧರ್ಮವೆನಿಸುವುದು.

ಸತ್ಯ, ಧರ್ಮ, ದಯೆ, ತ್ಯಾಗ, ಸಂಯಮ, ದಾನ, ಮೈತ್ರಿ, ಅಹಿಂಸೆ ಮೊದಲಾದ ಆತ್ಮೋದ್ಧಾರಕ ಗುಣಗಳನ್ನು ಋಗ್ವೇದವು ಜ್ಞಾನ, ಕರ್ಮ ಮತ್ತು ಉಪಾಸನಾ ಎಂಬ ಮೂರು ಪದಗಳಲ್ಲಿ ಅಡಕವಾಗಿ ಸೇರಿಸುತ್ತದೆ. ಇಲ್ಲಿ ಪ್ರಮುಖವಾದ ಒಂದು ಪ್ರಶ್ನೆ ಉದ್ಭವಿಸುತ್ತದೆ. ಧಾರ್ಮಿಕವಂತ ಯಾರು? ಋಗ್ವೇದವು ಹೀಗೆ ಉತ್ತರಿಸುತ್ತದೆ. ಸತ್ಕರ್ಮ ನಿರತನು, ರಾಗ ದ್ವೇಷಗಳಿಗೆ ಸಿಕ್ಕದವನು, ಯಾರ ವೈರಿಯೂ ಆಗಿರದವನು, ಅಧರ್ಮದ ಗುಂಡಿಗೆ ಬಿದ್ದವರನ್ನು ಕೂಡ ಮೇಲಕ್ಕೆತ್ತುವವನು. ಹಾಗೆಯೇ ಪರಮಾತ್ಮನ ಶಾಸನಕ್ಕೆ ತಲೆ ಬಾಗುವವನು. ಅಲಸ್ಯರಹಿತ, ಶುಭ್ರವಾದ ಆಚಾರ, ವಿಚಾರಗಳನ್ನುಳ್ಳವನು; ಶಾಂತಿ ಗುಣ ಪ್ರಧಾನ ಹಾಗೂ ಕುಟಿಲ ಭಾವನೆಗಳನ್ನೆಲ್ಲಾ ದಾಟಿ ಧರ್ಮದ ಪ್ರವಾಹದೊಂದಿಗೆ ನಡೆಯುತ್ತಾ ಮುಂದೆ ಸಾಗುವವನನ್ನು ಧಾರ್ಮಿಕವಂತನೆಂದು ಕರೆಯಲಾಗುತ್ತದೆ.

ವೈದಿಕ ಧರ್ಮ ಪ್ರಮುಖವಾಗಿ ಮೂರು ಅಂಗಗಳನ್ನು ಹೊಂದಿದೆ. ಅವುಗಳೆಂದರೆ;

1. ಜ್ಞಾನ
2. ಕರ್ಮ
3. ಉಪಾಸನಗಳು. ಈ ಅಂಶಗಳನ್ನು ಕೆಳಗಿನಂತೆ ವಿಶ್ಲೇಷಣೆಯನ್ನು ಮಾಡಲಾಗಿದೆ.

ವೈದಿಕ ಧರ್ಮದ ಮೊದಲನೆಯ ಅಂಶವೆಂದರೆ; ದಯಾನಂದ ಅವರ ಪ್ರಕಾರ ಜ್ಞಾನಕ್ಕೆ ಆಶ್ರಯವಾದುದ್ದು, ಇಲ್ಲಿ ಅಜ್ಞಾನಕ್ಕೆ ಅವಕಾಶವಿಲ್ಲ. ವೈದಿಕ ಧರ್ಮವು ಮೂಢನಂಬಿಕೆ ಮತ್ತು ಅಂಧಕಾರಗಳಿಂದ ಹೊರಬಂದು ಜ್ಞಾನವನ್ನು ಬೆಳಸಿ ದುರ್ಗಣಗಳನ್ನು ದೂರವಿರಿಸಿ ನಿರ್ಭಯದಿಂದರಬೇಕು. ಇದು ವೈದಿಕ ಧರ್ಮದ ತಿಳುವಳಿಕೆಯಿಂದ ಸಾಧ್ಯ. 'ಜ್ಯೋತಿರ್ವಣೀತ ತಮಸೋ ವಿಜಾನನ್ನಾರೇ ಸ್ಯಾಮದು ಇರತಾದಭೀಕೇ!' ಅಂದರೆ ವಿವೇಚನೆ ಮಾಡಿಕೊಳ್ಳುವ ವಿವೇಕದಿಂದಲೇ ವರ್ಧಿನಾಗುವ ಈ ಜ್ಞಾನ ಕೇವಲ ಆಧ್ಯಾತ್ಮಿಕ ವಿಷಯಗಳಿಗೆ ಮಾತ್ರ ಸೀಮಿತವಲ್ಲ. ಸಾಂಸಾರಿಕ ಜೀವಿಗಳ ವ್ಯವಹಾರಿಕ ಮಟ್ಟವನ್ನು ಹೆಚ್ಚಿಸಲು ಅತ್ಯವಶ್ಯಕವಾದುದು ಎಂದು ಹೇಳುತ್ತಾರೆ.

ವೈದಿಕ ಧರ್ಮದ ಎರಡನೆಯ ಅಂಶವೆಂದರೆ, ಕರ್ಮರಹಿತವಾದ ಜ್ಞಾನ ಜ್ಞಾನವೇ ಅಲ್ಲ. ಅದು ನಿಷ್ಪ್ರಯೋಜಕ. ಕೇವಲ ಗಾಳಿಗೋಪುರ ಕಾಯಕವೇ ಕೈಲಾಸವೆಂದು ಬಸವಣ್ಣ ಅವರು

ಹೇಳಿರುವುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಲೇಬೇಕು. ಕರ್ಮವನ್ನು ಮಾಡುತ್ತಲೇ ನೂರು ವರ್ಷಗಳವರೆಗೆ ಜೀವಿಸಲು ಇಚ್ಚಿಸಬೇಕು. ದಯಾನಂದ ಅವರ ಪ್ರಕಾರ; ಕರ್ಮ ಅನೇಕ ವಿಧಗಳು ಅಥವಾ ಬಗೆಗಳಿಂದ ಕೂಡಿದೆ. ವೈಯಕ್ತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಒಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿನ ಕರ್ತವ್ಯಗಳನ್ನು ಚಾಚುತಪ್ಪದೇ ನಿರ್ವಹಿಸಬೇಕು. ಬೇರೆಯವರಿಗೆ ಕೆಟ್ಟದಾಗದಂತೆ ತನ್ನ ಹಿತಕ್ಕಾಗಿ ಹಾಗೂ ಸರ್ವರ ಒಳಿತಿಗಾಗಿ ಮಾಡುವ ಕರ್ತವ್ಯಗಳೇ ಕರ್ಮ. ಇಂತಹ ಸರ್ವ ಕರ್ತವ್ಯಗಳ ಮೊತ್ತವನ್ನು ವೇದಗಳು 'ಯಜ್ಞ' ಎಂದು ಕರೆಯುತ್ತೇವೆ. ಸಂನ್ಯಾಸದ ಹೆಸರಿನಲ್ಲಿ ಕರ್ತವ್ಯದ ಕ್ಷೇತ್ರದಿಂದ ಓಡಿ ಹೋಗುವುದನ್ನು ವೈದಿಕ ಧರ್ಮವು ಒಪ್ಪುವುದಿಲ್ಲ. ಯಜ್ಞದ ಸಂದೇಶವೇ ವೇದದ ಮೂಲವೆನ್ನಬಹುದು. 'ನಿಜವಾಗಿ ಯಜ್ಞವೇ ನಿನಗೆ ಅಭಿವೃದ್ಧಿಕಾರಕವೂ, ಪ್ರಿಯಕರವೂ, ಆನಂದರಸವುಳ್ಳದ್ದು ಮೈತ್ರಿಯನ್ನು ವರ್ಧಿಸತಕ್ಕದ್ದು ಆಗಿದೆ.' "ಕುಟಿಲತನವನ್ನು ನಾಶ ಮಾಡುವುದರಲ್ಲಿ ಯಜ್ಞವು ನಿನ್ನ ವಜ್ರಾಯುಧವಾಗಿ ರಕ್ಷಿಸುತ್ತದೆ"[4] ಯಜ್ಞಃತೇ ವರ್ಜಂ ಅಹಿಹತ್ಯ ಅವತ್. ಸತ್ಕರ್ಮದಿಂದ ಆತ್ಮಗಳ ರಕ್ಷಣೆಯು ಆಗುತ್ತದೆ. ಸತ್ಕರ್ಮರಹಿತಜ್ಞಾನ ಒಂದು ನಿರರ್ಥಕ ಭಾರ. ಜ್ಞಾನ ಸಾರ್ಥಕವಾಗಬೇಕಾದರೆ ಸತ್ಕರ್ಮಗಳನ್ನು ಮಾಡುತ್ತಿರಲೇ ಬೇಕು.

ವೈದಿಕ ಧರ್ಮದ ಕೊನೆಯ ಅಥವಾ ೩ನೇ ಅವಿಭಾಜ್ಯ ಅಂಗವೆಂದರೆ; ಉಪಾಸನೆ. ಉಪಾಸನೆಯೆಂದರೆ, ಇಂದ್ರಿಯ ನಿಗ್ರಹ ಮಾಡಿ ಮನಸ್ಸನ್ನು ಪರಮಾತ್ಮನಲ್ಲಿ ನೆಟ್ಟು ಆತನ ಸಾಮೀಪ್ಯವನ್ನು ಅನುಭವಿಸುವ ಕ್ರಿಯೆ. ಪರಮಾತ್ಮನ ರೂಪದಲ್ಲಿರುವ ತಾಯಿ–ತಂದೆ, ಆಚಾರ್ಯ–ಗುರು–ಹಿರಿಯರ ಸತ್ಕಾರವೇ ಉಪಾಸನೆಯೆನಿಸಿಕೊಳ್ಳುವುದು. ಉಪಾಸನೆಯಿಂದ ಆತ್ಮವು ಪರಮಾನಂದವನ್ನು ಪಡೆಯುವುದು. ಉಪಾಸನಾ ಎಂಬ ಪದದ ಅರ್ಥವೆಂದರೆ: ಉಪ+ಅಸನಾ ಸಮೀಪದಲ್ಲಿ ಕುಳಿತುಕೊಳ್ಳುವುದು. ಅಂದರೆ ಪರಮಾತ್ಮನ ಸಮೀಪದಲ್ಲಿ ಕುಳಿತುಕೊಳ್ಳುವುದು. ಜೀವಾತ್ಮವು ಪರಮಾತ್ಮನಿಂದ ದೂರವಿಲ್ಲವೆಂದು ಮನವರಿಕೆಯಾಗುವುದು. ಪರಮಾತ್ಮನ ಸರ್ವವ್ಯಾಪಕ, ಭಗವದುಪಾಸನೆ ಸಹಜವಾಗಿಯೇ ಇದೆ. ಸಂಸಾರದಲ್ಲೇ ಮುಳುಗಿ ಹೋಗಿರುವ ಮನುಷ್ಯನ ಮನಸ್ಸನ್ನು ಹೊರ ಸೆಳೆದು ಪರಮಾತ್ಮನಲ್ಲಿ ನಿಲ್ಲಿಸಿ ಜ್ಞಾನದಿಂದ ಭಗವತ್ ಗುಣಗಳನ್ನು ಚಿಂತಿಸುವುದು ಹಾಗೂ ಧರಿಸುವುದು ಉಪಾಸನೆಯಾಗಿದೆ. ಈ ಉಪಾಸನೆಗೆ ಪೂರ್ವಭಾವಿಯಾಗಿ ಪರಮಾತ್ಮನಲ್ಲಿ ಪ್ರೇಮ ಬೆಳೆಸುವ ಸ್ತುತಿ ಆ ನಮ್ರ ಹೃದಯವಂತಿಕೆಯನ್ನು ಬೆಳೆಸುವ ಪ್ರಾರ್ಥನೆಗಳನ್ನು ಮಾಡಬೇಕು.ಇದರಿಂದ ಮಾನವನ ಜೀವನ ಬಲಿಷ್ಠವಾಗಿ ಶಕ್ತಿಸ್ಫೂರ್ತಿಗಳ ಬಗೆಯೇ ಆಗುತ್ತದೆ. ಹೀಗೆ ಉಪಾಸನೆ ವೈದಿಕ ಧರ್ಮದ ಹೃದಯವಾಗಿದೆ. ಧರ್ಮ ಮೋಕ್ಷದ ದಾರಿದೀಪ. ಧರ್ಮ ಅತ್ಯಮತ ಅಗತ್ಯ ಹಾಗೂ ಅನಿವಾರ್ಯ. ಅಧಿಕಾರ, ಹಣ, ಆಸ್ತಿ, ಅಂತಸ್ತ್ಯೇ ಜೀವನವಲ್ಲ. ಅಂದರೆ ಆಧ್ಯಾತ್ಮಿಕತೆಯೇ ಜೀವನ ವೇದೋಕ್ತ ಜೀವನಾದರ್ಶಮಾರ್ಗವೇ ಮಾನವನಿಗೆ ಮೋಕ್ಷವನ್ನುಂಟು ಮಾಡುವುದು. ಜೀವನವನ್ನು ಸರ್ವಾಂಗ ಸುಂದರವಾಗಿ ಮಾಡುವುದು. ಧರ್ಮದ ಮೂಲಗಳಿಂದ

ವೇದಗಳ ಬಗೆಗೆ ಎಷ್ಟು ಪ್ರಶಂಸಿಸಿದರೂ ಕಡಿಮೆ ಬುದ್ಧಿಯುಕ್ತವೂ, ವೈಜ್ಞಾನಿಕವೂ, ಸರ್ವಹಿತ ಸಾಧಕವೂ ಆದ ಜ್ಞಾನದಿಂದ ವೇದಗಳು ತುಂಬ ತುಳುಕುತ್ತಿವೆ ಎಂಬ ಮಾತನ್ನು ದಯಾನಂದ ಅವರು ಸಾರಿ ಸಾರಿ ಹೇಳಿದ್ದಾರೆ. ದಯಾನಂದ ಅವರ ಪ್ರಕಾರ; ಧರ್ಮವೆಂದರೆ ವೈಚಾರಿಕತೆ ಆತ್ಯಾವಶ್ಯಕ. ಅಂದರೆ ಯಾವುದನ್ನೇ ಆಗಲಿ ವಿಚಾರ ಮಾಡದೆ, ಚರ್ಚಿಸದೆ ಕುರುಡು ಕುರುಡಾಗಿ ಒಪ್ಪಿಕೊಳ್ಳುವುದಲ್ಲ. ಅಂದರೆ ವೈಚಾರಿಕವೂ, ತಾರ್ಕಿಕವೂ ವೈಜ್ಞಾನಿಕವಾದುದು. 'ನಾನು ಹೇಳಿದೆ ಎಂಬ ಒಂದೇ ಕಾರಣದಿಂದ ಯಾವುದನ್ನೂ ನಂಬಬೇಡಿರಿ. ಪ್ರತಿಯೊಂದನ್ನು ತೀಕ್ಷ್ಣ ಪರೀಕ್ಷಣಾ ಪ್ರಯೋಗದ ಅನಂತರವೇ ಸ್ವೀಕರಿಸಿರಿ. ಜನರ ಮಾತಿಗೆ ಮರುಳಾಗಬೇಡಿ. ವಾಸ್ತವಿಕತೆಯತ್ತ ಹೊರಳಿರಿ' ಎಂಬ ವೈಚಾರಿಕ ಆಹ್ವಾನವನ್ನು ದಯಾನಂದ ಅವರು ಹೇಳುತ್ತಾರೆ. ಯಾವುದು ಪಕ್ಷಾತೀತವಾದುದೋ ಸತ್ಯ ಸಂಪನ್ನವಾದುದೋ ಅದೇ ನಿಜವಾದ ಧರ್ಮ. ಇಂತಹ ಧರ್ಮ ಬ್ರಹ್ಮ ಮತ್ತು ಋಷಿಮುನಿಗಳ ಮಾತಿನಿಂದ ವೇದಗಳ ಜ್ಞಾನವನ್ನು ಗರ್ಭೀಕರಿಸಿಕೊಂಡಿರುತ್ತದೆ. ಯಾವುದು ಪಕ್ಷಪಾತದಿಂದ ಕೂಡಿರುತ್ತದೋ, ನ್ಯಾಯದ ವಿರುದ್ದವಾದುದೋ, ಅಸತ್ಯವಾದುದೋ ಅಂತಹುದೆಲ್ಲಾ ವೇದಗಳಲ್ಲಿ ಕಾಣುವ ದೈವನುಡಿಗೆ ವಿರುದ್ಧವಾದುದು ಮತ್ತು ಅಧರ್ಮಯುಕ್ತವಾದುದು. ಮಾನವೀಯ ಸದ್ಗುಣಗಳ ಸಾಕಾರಕ್ಕೆ ಮತ್ತೊಂದು ಹೆಸರೇ ಧರ್ಮ. ಮನುಷ್ಯನನ್ನು ಮನುಸ್ಯತ್ವದಿಂದ ಅವನತಿ ಹೊಂದಲು ಅವಕಾಶ ಕೊಡದ ವೈಚಾರಿಕವಾದ, ಧಾರ್ಮಿಕ ವಿಧಿಗಳೇ ಧರ್ಮವೇ ತ್ಯಾಜ್ಯವಲ್ಲ. ಧರ್ಮವೆನಿಸುವುದು ಧರ್ಮವೇ ತಪ್ಪಲ್ಲ. ಧರ್ಮದ ಗ್ರಹಿಕೆಯ ತಪ್ಪು ಕಲ್ಪನೆಗಳನ್ನು ತೊಲಗಿಸಿ, ನಿಜವಾದ ಧರ್ಮವು ಗೋಚರಿಸದೆ ಇರದು.

ದಯಾನಂದ ಅವರ ಪ್ರಕಾರ; ಪರಮಾತ್ಮನ ಆಜ್ಞೆಯೇ ಧರ್ಮ. ಧರ್ಮವೆಂದರೆ ವಿಧಿ; ಸತ್ಯ; ನಿಷ್ಪಕ್ಷಪಾತ ಅಧ್ಯಯನ: ದಾನ; ಎಂದು ಹೇಳುತ್ತಾರೆ. ಹಾಗೆಯೇ ವೇದಮಂತ್ರಗಳ ಭಕ್ತಿಪುರಸ್ಸರ ಪ್ರಾರ್ಥನೆಗಳೇ ಧರ್ಮ. ಮಾನವನು ಮಾಡುವ ಒಳ್ಳೆಯ ಕೆಲಸ ಕರ್ತವ್ಯ ಕರ್ಮಗಳೇ ಧರ್ಮ. ಧರ್ಮಕ್ಕೆ ಲಿಂಗ, ಕುಲ, ಮತ, ಜಾತಿ, ಪಂಥ, ವರ್ಣ, ದೇಶ, ಜನಾಂಗಗಳ ಭೇದವಿಲ್ಲವೆಂದು ಸಾರಿ ಸಾರಿ ದಯಾನಂದ ಅವರು ಹೇಳುತ್ತಾರೆ.

ದಯಾನಂದ ಸರಸ್ವತಿ ಅವರ ಪ್ರಕಾರ; ಅಧರ್ಮ ಯಾವುದು ಎಂದರೆ ಪರಮಾತ್ಮನ ಅವಜ್ಞೆ ಅನ್ಯಾಯ, ಅಸತ್ಯ, ಪಕ್ಷಪಾತ, ಕಳ್ಳತನ, ದ್ವೇಷ ತಾಳುವುದು, ಈರ್ಷೆ ಪಡುವುದು, ಅನೃತ, ಪೈಶುನ್ಯ, ಹಿಂಸೆ ವ್ಯಭಿಚಾರ"[6.] ದಯಾನಂದ ಸರಸ್ವತಿ ಅವರ ದೃಷ್ಟಿಯಲ್ಲಿ ಯಾವ ಧರ್ಮವು ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಪ್ರೋತ್ಸಾಹಿಸುತ್ತದೋ ಅದು ನಿಜವಾದ ಧರ್ಮವಲ್ಲವೆಂದು ದಯಾನಂದ ಅವರು ಖಂಡಿಸುತ್ತಾರೆ. ಪೌರಾಣಿಕ ಕುಸಂಪ್ರದಾಯಕತೆಯನ್ನು ನಿಜವಾದ ಧರ್ಮವು ಒಪ್ಪಲಾರದು. ಮನಸ್ಸು ಸಂಕುಚಿತವಾದಂತೆಲ್ಲಾ ಮಾನವರು ಯಾವುದೋ ಒಂದು ಕಟ್ಟುಪಾಡಿಗೆ ಬದ್ಧರಾಗುತ್ತಾರೆ. ಕೆಲವರು

ಮೌಢ್ಯದಿಂದ ಮೂರ್ತಿ ಪೂಜೆಯಲ್ಲಿ ಮೂಢನಂಬಿಕೆಯಿಡುತ್ತಾರೆ. ಮತ್ತೆ ಕೆಲವರು ನದಿ, ಪ್ರಾಣಿ, ಗಿಡ, ಪಕ್ಷಿಗಳನ್ನು ಆರಾಧಿಸುತ್ತಾರೆ. ಈ ಎಲ್ಲದರ ವಿರುದ್ಧ ದಯಾನಂದ ಅವರು ತಮ್ಮ ಧೀರವಾಣಿಯಿಂದ ಪ್ರತಿಭಟಿಸಿದರು. "ಧರ್ಮಾಚರಣೆ ನಾಶವಾಗಿ ಕೇವಲ ಪೂಜೆ, ನೈವೇದ್ಯ, ಕಾಣಿಕೆ, ಅಭಿಷೇಕಗಳಿಗೆ ಸೀಮಿತವಾದ ಪಾಪಕೃತ್ಯಗಳು ಮತ್ತು ಸ್ವೇಚ್ಛಾ ಜೀವನ ನಡೆಸುತ್ತಿರುವ ಇಂದಿನ ದಿನಗಳಲ್ಲಿ ಧರ್ಮದ ಜಾಗೃತಿ ಮೂಡಿಸುವುದು ಬಹಳ ಅವಶ್ಯಕವಾಗಿದೆ. ಮೂಢನಂಬಿಕೆ, ವಿಗ್ರಹಾರಾಧನೆಗಳಿಂದ ಮುಕ್ತವಾದ ವಿದ್ಯೆ ವಿಜ್ಞಾನಗಳ ತಳಹದಿಯುಳ್ಳ ವೈದಿಕ ಧರ್ಮವೆಂದು ಕರೆಯಲ್ಪಡುವ ವೇದಗಳ ಅನುಷ್ಠಾನ ನಿಜವಾದ ಸನಾತನ ಧರ್ಮ"[7] ದಯಾನಂದ ಅವರಲ್ಲಿ ಕಾಣಬಹುದು.

'ಬೇರುಗಳು ಕತ್ತರಿಸಲ್ಪಟ್ಟರೆ ಮರವು ನಾಶವಾಗುವುದು. ಪಾಪಗಳು ವೃದ್ಧಿಯಾದರೆ, ಧರ್ಮವು ನಾಶವಾಗುವುದು.' ದುಷ್ಟಕೂಟಗಳು ಹೆಚ್ಚಿದರೆ ರಾಷ್ಟವೇ ನಾಶವಾಗುವುದು? ಇಂತಹ ಒಂದು ಪರಿಸ್ಥಿತಿ ಇಂದು ನಮ್ಮ ರಾಷ್ಟ್ರದಲ್ಲಿ ತಲೆದೋರಿದೆ. ಧರ್ಮಸ್ವರೂಪವಾದ ಸತ್ಯ, ನ್ಯಾಯ, ನೀತಿ, ಪ್ರೀತಿಗಳು ಜನಜೀವನದಲ್ಲಿ ನಾಶವಾಗಿ ಪುರಾಣಗಳು, ಪಂಥಗಳೇ ಧರ್ಮವೆಂಬ ಭಾವನೆ ಜನರಲ್ಲಿ ಬೇರು ಬಿಟ್ಟಿದೆ. ವೇದಗಳ ಧರ್ಮ ಅನುಸರಿಸುತ್ತಿದ್ದ ಇವರಿಗೆ ವೈದಿಕರೆಂದೇ ಹೆಸರು. ಆರ್ಯವರ್ತದಲ್ಲಿದ್ದ ಎಲ್ಲಾ ಮನುಷ್ಯ ಕುಲದವರೂ ವೈದಿಕರಾಗಿದ್ದರು. ಇವರು ವೇದ ಅಂದರೆ; ವಿದ್ಯೆ. ವಿಜ್ಞಾನದಲ್ಲಿ ಬಹಳ ಪರಿಣಿತರಾಗಿದ್ದರು. ಇದು ಜ್ಞಾನಭಂಡಾರ, ಪುರಾಣವಲ್ಲ. ವೇದಕಾಲದಲ್ಲಿ ಈ ಸಂಸ್ಕೃತಿಯಿರಲಿಲ್ಲ. ವಿಗ್ರಹಾರಾಧನೆಯಿರಲಿಲ್ಲ. ಮೂಢನಂಬಿಕೆ ಇರಲಿಲ್ಲ. ಕಟ್ಟುಪಾಡುಗಳಿರಲಿಲ್ಲ. ಜಾತಿ ವಿಂಗಡನೆ–ಭೇದಗಳಿರಲಿಲ್ಲ. ಗುರುಕುಲ ಪದ್ಧತಿಯಲ್ಲಿ ವಿದ್ಯಾಭ್ಯಾಸದ ಅವಕಾಶವಿತ್ತು. ಸ್ತ್ರೀಯರನ್ನು ತಾಯಿ ಮತ್ತು ಸೋದರಿ ಸ್ಥಾನದಲ್ಲಿರಿಸಿ ಗೌರವಿಸಲಾಗುತ್ತಿತ್ತು.

ದಯಾನಂದ ಅವರು ತಮ್ಮ ಅಚಲವಾದ ನಿರ್ಧಾರಕ್ಕೆ ಬರಲು ವೇದಗಳೇ ಕಾರಣ. "ಇಂದಿನ ಹಿಂದೂ ಸಮಾಜದಲ್ಲಿ ಸಾವಿರಾರು ಹೆಸರುಗಳಿಂದ ಅನೇಕ ದೇವರ ವಿಗ್ರಹಗಳನ್ನು ಪೂಜಿಸುವ ಪದ್ಧತಿ ಯಾವ ನಾಗರಿಕ ಸಮಾಜದಲ್ಲೂ ಇಲ್ಲ. ವೇದಗಳ ಕಾಲದಲ್ಲಂತೂ ಇರಲೇ ಇಲ್ಲ. ದೇವರು ಎಂದರೆ ನಮ್ಮಲ್ಲಿ ತಪ್ಪು ಕಲ್ಪನೆ ಇದೆ. ಯಾವುದರ ಹೊರತು ಮಾನವ ಬದುಕಲಿಕ್ಕೆ ಸಾಧ್ಯವೇ ಇಲ್ಲವೋ ಅದೇ ದೇವರು"[8]. ದೇವರು ವೈದಿಕ ಧರ್ಮ ನಿಜವಾಗಿಯೂ ದೋಷಮುಕ್ತವಾಗಿತ್ತು. ಇಲ್ಲಿ ಜಾತಿವಿಂಗಡನೆ ಇರಲಿಲ್ಲ. ವಿಗ್ರಹಾರಾಧನೆ ಇರಲಿಲ್ಲ. ಮೂಢನಂಬಿಕೆಯಿರಲಿಲ್ಲ. ವಶೀಕರಣ ವಿದ್ಯೆ ವಾಮಾಚಾರವಿರಲಿಲ್ಲ. ಮಾನವ ಜನಾಂಗವೇ ಒಂದು.ಇದರಲ್ಲಿ ಮೇಲು ಕೀಳೆಂಬ ತಾರತಮ್ಯವಿಲ್ಲದೆ ಎಲ್ಲಾರು ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದರು. ಪ್ರಾಚೀನ ಗ್ರಂಥವಾದ 'ಋಗ್ವೇದವು' ಮಾನವನ ಕುಲಕ್ಕೆ ಭಾರತವು ನೀಡಿರುವ ವಿಶಿಷ್ಟ ಕೊಡುಗೆಯಾಗಿದ್ದು, ಜಾತಿ, ಮತ, ಪಂಥಗಳು, ದೇಶ, ಕಾಲ, ಜನಾಂಗಗಳ ಭೇದವಿಲ್ಲದೆ ವಿಶ್ವವೆಲ್ಲವೂ ತನ್ನ ಮನೆ ಜಗದ ಜನಾಂಗ ಎಂದರೆ, ತನ್ನ ಕುಟುಂಬ ಎಂದು ಪರಿಗಣಿಸಿ

"ಸರ್ವೇ ಜನಃ ಸುಖಿನೋಭವಂತು ಎಂದು ತ್ರಿಕರಣ ಪೂರ್ವಕವಾಗಿ ಹಾರೈಸಿ ಪ್ರಾರ್ಥಿಸಿದ ವಿಶ್ವವಿಶಾಲ ದೃಷ್ಟಿಯ ವೈದಿಕ ಋಷಿಗಳು ಬಾಳ ಬೆಳಗಿದ ಪವಿತ್ರ ಭೂಮಿ ಭಾರತ. 'ಭಗವಂತನೊಬ್ಬನೇ ನಾಮಗಳು ಮಾತ್ರ ಹಲವು' ಎಂಬ ಸರ್ವಧರ್ಮ ಸಮನ್ವಯ ಸಂದೇಶವನ್ನು ಲೋಕಕ್ಕೆ ಮೊಟ್ಟಮೊದಲು 'ಏಕಂ ಸತ್, ವಿಪ್ರಾಬಹುಧಾ ವದಂತಿ' ಎಂಬ ರೂಪದಲ್ಲಿ ವೇದದ ಮೂಲಕ ಮೊಳಗಿದ ಭೂಮಿ ನಮ್ಮೀ ಭರತ ಖಂಡ"[9]. ಮಾನವನು ಧರ್ಮದ ಅನುಷ್ಠಾನವನ್ನು ಯೋಗ್ಯ ರೀತಿಯಲ್ಲಿ ಮಾಡುವುದರಿಂದ ಪವಿತ್ರನಾಗಿ ತತ್ವಜ್ಞಾನಿಯಾಗಿ ಮೋಕ್ಷವನ್ನು ಪಡೆಯುತ್ತಾನೆ. ಋಷಿಪ್ರಣೀತ ಗ್ರಂಥಗಳು ಧರ್ಮ ಸಂದೇಶವನ್ನು ನಮಗೆ ನೀಡುತ್ತವೆ. ಏಕೆಂದರೆ ಋಷಿಗಳು ಸರ್ವಶಾಸ್ತ್ರಜ್ಞರೂ, ದಿವ್ಯಜ್ಞಾನಿಗಳು ಮತ್ತು ಧರ್ಮಾತ್ಮರೂ ಆಗಿದ್ದರು. ಧರ್ಮದ ಸಹಾಯದಿಂದ ಮಾತ್ರ ಮಾನವನು ಕಠಿಣ ದುಃಖ ಸಾಗರವನ್ನು ದಾಟುತ್ತಾನೆ. ಪರಮಾತ್ಮನೆಡೆಗೆ ಧರ್ಮ ಮಾನವನನ್ನು ಕೊಂಡೊಯ್ಯುತ್ತದೆ. ಒಟ್ಟಿನಲ್ಲಿ ವೈದಿಕ ಧರ್ಮದ ಗುರಿ ಪಶುತ್ವ ಮರ್ದನ ಹಾಗೂ ದೈವತ್ವ ವರ್ಧನ.

ದಯಾನಂದ ಸರಸ್ವತಿ ಅವರು ವೈದಿಕ ಧರ್ಮವು ನಶಿಸಿ ಹೋಗದಂತೆ ಜೀವಂತವಾಗಿ ಉಳಿಯಬೇಕೆಂದು 1875ನೇ ಫೆಬ್ರವರಿ 4ರಂದು ಮಹಾರಾಷ್ಟ್ರದ ಮುಂಬಯಿಯಲ್ಲಿ 'ಆರ್ಯ ಸಮಾಜ'ವನ್ನು ಸ್ಥಾಪನೆ ಮಾಡಿದರು. ಇದು ಇಡೀ ದೇಶದ ನಾನಾ ಭಾಗಗಳಲ್ಲಿಯೂ ವೈದಿಕ ಧರ್ಮದ ಸತ್ಯದ ಪ್ರಚಾರಗಳಲ್ಲಿ ತೊಡಗಿರುವುದನ್ನು ಇಂದು ಸಹ ಜೀವಂತವಾಗಿರುವುದನ್ನು ನಾವು ಕಾಣಬಹುದು. ದಯಾನಂದ ಅವರು ತಮ್ಮ ಅನುಯಾಯಿಗಳಿಗೆ ವೈದಿಕ ಧರ್ಮದ ಪ್ರಚಾರದ ಉದ್ದೇಶಗಳಿಗೆ ಒಂದು ಸಂಘವನ್ನು ಸ್ಥಾಪಿಸಿದರು. ಅವರ ದುಡಿಮೆಯ ಫಲದಿಂದ ಈ ಕಾರ್ಯವು ಯಶಸ್ವಿಯಾಯಿತು. ಆರ್ಯ ಸಮಾಜವು ಇಡಿ ಜಗತ್ತಿನಲ್ಲೇ ಒಂದು ಹೊಸ ಧಾರ್ಮಿಕ ಆಂದೋಲನವನ್ನು ಉಂಟುಮಾಡಿತು. ಆರ್ಯ ಸಮಾಜವು ಶ್ರದ್ಧೆ ಮತ್ತು ಬುದ್ಧಿಗಳ ಹೊಂದಾಣಿಕೆ ಪಾಠವನ್ನು ವಿಶ್ವಕ್ಕೆ ಉಣಬಡಿಸಿತು. ಈ ಆರ್ಯ ಸಮಾಜವು ವೈದಿಕ ಧರ್ಮವನ್ನು ಶಬ್ದರೂಪದಲ್ಲಿ ಭದ್ರಗೊಳಿಸಿತು.

ಆದಿ ಗ್ರಂಥವಾದ ವೇದಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ದಯಾನಂದ ಅವರು ತಮ್ಮ ನಿಲುವನ್ನು ಸ್ಪಷ್ಟ ಪಡಿಸಿದ್ದಾರೆ. ಮೂರ್ತಿಪೂಜೆ ಮಾಡುವುದರಿಂದ ಮೌಢ್ಯತೆ ಹೆಚ್ಚಾಗುತ್ತದೆ. ಇದರ ಜೊತೆಗೆ ಮನುಷ್ಯ ತನ್ನ ವ್ಯಕ್ತಿತ್ವವನ್ನು ಮೌಢ್ಯದ ಆಚಾರ-ವ್ಯವಹಾರಗಳಿಗೆ ಒತ್ತೆಯಿಟ್ಟಂತಾಗುತ್ತದೆ. ಆದ್ದರಿಂದಲೇ ದಯಾನಂದ ಅವರು ಇಂತಹ ದುರಾಚಾರದಿಂದ ದೂರ ಉಳಿಯುವಂತೆ ನಾಡಿನ ಜನತೆಗೆ ಸಂದೇಶವನ್ನು ಕೊಟ್ಟಿದ್ದಾರೆ.

"ವೈದಿಕ ಧರ್ಮ ಜ್ಞಾನಾಶ್ರಿತ ಧರ್ಮ ಇದರಲ್ಲಿ ಅಜ್ಞಾನಕ್ಕೆಡೆಯಿಲ್ಲ. ಈ ಜ್ಞಾನ ಸರ್ವವಿಷಯಾಚ್ಛಾದಕ ಶಾಶ್ವತ ತತ್ವಗಳ ಹಾಗೂ ಅಶಾಶ್ವತ ತತ್ವಗಳ ಭ್ರಾಂತಿರಹಿತ ಜ್ಞಾನ ಪಡೆದೇ

ಮಾನವನು ಆದರ್ಶ ಮಾನವನಾಗಿ, ಇಹಪರಗಳೆರಡನ್ನು ಸಾಧಿಸಿಕೊಳ್ಳುವರು. ಅಂಧ ವಿಶ್ವಾಸಕ್ಕೆ ಅಜ್ಞಾನದ ಆಡಳಿತಕ್ಕೆ ವೈದಿಕ ಧರ್ಮದಲ್ಲಿ ಸೂಜಿಯ ಮೊನೆಯಷ್ಟೂ ಜಾಗವಿಲ್ಲ"[10.] ಧರ್ಮವನ್ನು ಸ್ವಲ್ಪವೂ ಆಚರಿಸದೆ ಧರ್ಮದ ಹೆಸರಿನಲ್ಲಿ ಜನರನ್ನು ವಂಚಿಸುತ್ತಾರೆ. ಲೋಭಯುಕ್ತರಾಗಿರುವುದರಿಂದ ಕಪಟಿಗಳೂ ಧೂರ್ತರೂ ನೀಚರೂ ಆಗುತ್ತಾರೆ. ಆದುದ್ದರಿಂದ ವಿದ್ವಾಂಸನು ವೇದೋಕ್ತವಾದ ಸತ್ಯಧರ್ಮವನ್ನು ಪಾಲಿಸುತ್ತ ಧರ್ಮದಲ್ಲಿ ಸ್ಥಿಪಿತನಾಗಬೇಕು. ಧರ್ಮ ಸಂಚಯವನ್ನು ಮಾಡಬೇಕು. ಧರ್ಮದ ಸಹಾಯದಿಂದ ಮಾತ್ರ ಮಾನವನು ಕಠಿಣ ದುಃಖಸಾಗರವನ್ನು ದಾಟುತ್ತಾನೆ. ಪರಮಾತ್ಮನೆಡೆಗೆ ಧರ್ಮ ಮಾನವನನ್ನು ಕೊಂಡೊಯ್ಯುತ್ತದೆ. ಒಟ್ಟಿನಲ್ಲಿ ವೈದಿಕ ಧರ್ಮದ ಗುರಿ ಪಶುತ್ವ ಮರ್ದನ ಹಾಗೂ ದೈವತ್ವ ವರ್ಧನ.

'ಸರ್ವಶಕ್ತನೂ, ನಿರಾಕಾರನೂ ಸರ್ವಾಂತರ್ಯಾಮಿಯೂ ಆದ ಆ ಪರಮಾತ್ಮನಿಗೆ ಒಂದು ವಿಗ್ರಹದ ಆಕಾರ ಇರಲು ಹೇಗೆ ಸಾಧ್ಯ. ಒಂದು ವಿಗ್ರಹದಲ್ಲಿ ನಾವು ದೇವರನ್ನು ಕಂಡರೆ ಸುತ್ತಲೂ ಇರುವ ಗಾಳಿ, ಬೆಳಕು–ನೀರು, ಭೂಮಿ ಆಕಾರಗಳಲ್ಲಿ ಅವನನ್ನು ಕಾಣಲಾಗುವುದಿಲ್ಲ. ಎಲ್ಲೆಲ್ಲೂ ಅವನೇ ಇದ್ದಾನೆ ಎಂದ ಮೇಲೆ ಅವನಿಗೆ ಒಂದು ಆಕಾರವನ್ನು ಏಕೆ ಕೊಡಬೇಕು?ಅವನು ಯಾರಿಗೂ ಕಾಣದ ಮೇಲೆ ಇದೇ ಆಕಾರದಲ್ಲಿ ಇದ್ದಾನೆ ಎಂದು ಹೇಗೆ ಹೇಳುವುದು? ವಿಶ್ವದ ಸಂಪತ್ತಿಗೆ ಒಡೆಯನಾದ ಜಗನ್ಮಯನಿಗೆ ಪೂಜೆ ಬೇಡ. ಧೂಪ ಬೇಡ. ಗಂಧಾಕ್ಷತೆ ಬೇಡ. ಅಲಂಕಾರ ಬೇಡ. ಕಾಣಿಕೆ ಬೇಡ. ಗುಡಿಗೋಪುರ ಬೇಡ. ಅವನಿಗೆ ಬೇಕಾದುದು ಶುದ್ಧಚಿತ್ತ. ಶ್ರಮಜೀವನ, ಪರಪೀಡನೆ ಮಾಡದಿರುವುದು ಪರೋಪಕಾರ ದೇಶ ಭಕ್ತಿ!.

ವೈದಿಕ ಧರ್ಮದಲ್ಲಿ ಜೀವಂತ ಮೂರ್ತಿಗಳಾದ ತಾಯಿ–ತಂದೆ–ಆಚಾರ–ಗುರು–ಹಿರಿಯರು ಇವರ ಪೂಜೆಗೆ ಅಂದರೆ, ಅದರ ಸತ್ಕಾರಕ್ಕೆ ಅವಕಾಶವಿದೆಯೇ ಹೊರತು ಜಡಧಾತುಗಳ ಕಲ್ಲು–ಮರಗಳ ವಿಗ್ರಹಗಳನ್ನು ದೇವರೆಂದು ತಿಳಿದು ಧೂಪ–ದೀಪ–ನೈವೇದ್ಯಾದಿಗಳಿಂದ ಅರ್ಚಿಸುವ ಪದ್ಧತಿಗೆ ಅವಕಾಶವೇ ಇಲ್ಲ. ಪರಮಾತ್ಮ ಧರ್ಮದಲ್ಲಿಯೇ ಪ್ರಕಾಶಮಾನನಾಗಿದ್ದಾನೆ. ಮತ್ತು ಅಧರ್ಮರಹಿತನಾಗಿ ಧರ್ಮವನ್ನು ಪ್ರಕಾಶಪಡಿಸುತ್ತಾನೆ. ಆದುದ್ದರಿಂದಲೇ ಪರಮಾತ್ಮನನ್ನು 'ಅಧರ್ಮರಾಜ' ಎಂದು ಕರೆಯಲಾಗಿದೆ. ಹೀಗೆ, ದಯಾನಂದ ಅವರು ಒಬ್ಬ ವೈದಿಕ ಧರ್ಮದ ಪ್ರವರ್ತಕರಾಗಿ ಅವರ ದೃಷ್ಟಿಕೋನದಲ್ಲಿ ಧರ್ಮದ ಸ್ವರೂಪ ಮತ್ತು ಪ್ರಚಾರ, ಅನುಸರಣೆಯನ್ನು ತಿಳಿಸಿರುವುದನ್ನು ದಾಖಲಿಸಲಾಗಿದೆ. ಅವರ ಅನಂತರ ದೇಶದಾದ್ಯಂತ ಸೇಠ್ ಮಥುರಾದಾಸ್, ಪಾನಾಚಂದ್ ಆನಂದ್ ಪಾರೀಖ್ ಗಿರಿಧಾರಿಲಾಲ್, ಸೇವಕ್‌ಲಾಲ್ ಅಂತಹವರು ಆರ್ಯ ಸಮಾಜದ ಪ್ರಥಮ ಸದಸ್ಯರಿಂದ ಪ್ರಾರಂಭಗೊಂಡು ಇಂದು ಜಗತ್ತಿನಾದ್ಯಂತ ಕೋಟ್ಯಾಂತರ ಅನುಯಾಯಿಗಳಿರುವುದನ್ನು ಗುರುತಿಸಬಹುದು.

**ಕೊನೆ ಟಿಪ್ಪಣಿಗಳು**


1. ಸುಧಾಕರ ಚತುರ್ವೇದಿ, ಮಹರ್ಷಿ ದಯಾನಂದ ಸರಸ್ವತಿ, ಆರ್ಯ ಸಮಾಜ, ಬೆಂಗಳೂರು, 1994, ಪುಟ – 1.
2. ಡಾ.ವಿ.ಎನ್. ಶೇಷಗಿರಿರಾವ್, ಸಮಕಾಲೀನ ಭಾರತೀಯ ತತ್ತ್ವಶಾಸ್ತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1985, ಪುಟ – 77.
3. ಋಗ್ವೇದ : 5,15,2.
4. ಋಗ್ವೇದ : 3,32,12.
5. ವಶಿಷ್ಠ, ಅದ್ವೈತ ಮತ ಪರೀಕ್ಷಣ, ಆರ್ಯ ಸಮಾಜ, ಬೆಂಗಳೂರು, 1988, ಪುಟ – 11.
6. ಸ್ವಾಮೀ ದಯಾನಂದ ಸರಸ್ವತೀ, ದಯಾನಂದ ಪ್ರವಚನ ಮಾಲಾ, ಕರ್ನಾಟಕ ಆರ್ಯ ಪ್ರತಿನಿಧಿ ಸಭಾ, ಬೆಂಗಳೂರು, 1992, ಪುಟ – 26.
7. ಸಿ.ಎಸ್.ಮಹದೇವಪ್ಪ, ಹಿಂದೂ ರಾಷ್ಟ್ರದರ್ಶನ, ಆರ್ಯ ಸಮಾಜ, ಬೆಂಗಳೂರು, 1995, ಪುಟ – ಮುನ್ನುಡಿ iii.
8. ಅದೇ ಪುಟ – 4.
9. ಕೆ.ಶಂಕರನಾರಾಯಣ ಭಟ್, ಹಿಂದೂ ಧರ್ಮದ ಪರಿಚಯ, ಶ್ರೀರಾಮಕೃಷ್ಣ, ಪ್ರಕಾಶನ, ಕೊಡಗು, 1968, ಪುಟ – 621.